Literacy for a Billion

Movie: Kindara Jogi
Year: 1989

Song: Janagalu Janagalu
Lyricist: Hamsalekha

ಜನಗಳು ಜನಗಳು
ಇವರು ಕೆಟ್ಟ ಜನಗಳು
ಜನಗಳು ಜನಗಳು
ಇವರು ಕೆಟ್ಟ ಜನಗಳು
ಜನಗಳು ಜನಗಳು
ಇವರು ಕೆಟ್ಟ ಜನಗಳು
ಜನಗಳು ಜನಗಳು
ಇವರು ಕೆಟ್ಟ ಜನಗಳು
ಊರುದ್ಧಾರ ಮಾಡ್ತೀನಂತ
ಹೋದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಪಾಪನ್ಮಗ ಮನ್ಸಂಗ್ ಬುದ್ಧಿ
ಹೇಳ್ದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಮನ್ಷಾ
ಹಾವು ಹಲ್ಲಿ ಚೇಳಿಗಿಂತ್ಲೂ
ವಿಷ ವಿಷ ವಿಷ
ಮನ್ಷಾ
ತೋಳ ಸಿಂಹ ಹುಲಿಗಿಂತ್ಲೂ
ಕ್ರೂರ ಕ್ರೂರ ಕ್ರೂರ
ಊರುದ್ಧಾರ ಮಾಡ್ತೀನಂತ
ಹೋದೋರೆಲ್ಲಾ
ಎತ್ಹೋದ್ರಣ್ಣಾ

ಎಕ್ಹುಟ್ಟೋದ್ರಣ್ಣಾ
ಪಾಪನ್ಮಗ ಮನ್ಸಂಗ್ ಬುದ್ಧಿ
ಹೇಳ್ದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಅದೇನ್ ಜನಗಳೋ
ಅದ್ಯಾಕ್ ಅಂಗಾಡ್ತಾರೋ
ಅದ್ಯಾಕ್ ಅಂಗಾಡ್ತಾರೋ
ಊರು ಕಟ್ತಾರೆ ಕೇರಿ ಕಟ್ತಾರೆ
ಮನೆ ಕಟ್ತಾರೆ
ಬಾಳೋದಕ್ಕೋ
ಕೋಳಿ ಕಚ್ಚಾಟ
ಅದೇನ್ ಮನ್ಷಾರೋ
ಅದ್ಯಾಕ್ ಅಂಗ್ಮಾಡ್ತಾರೋ
ಅದ್ಯಾಕ್ ಅಂಗ್ಮಾಡ್ತಾರೋ
ನೆಲ ಊಳ್ತಾರೆ ಕಳೆ ಕೀಳ್ತಾರೆ
ಬೆಳೆ ತರ್ತಾರೆ
ತಿನೋದಕ್ಕೋ
ನಾಯಿ ಕಚ್ಚಾಟ
ಮಾತಿನಲ್ಲಿ ಹಸುಳೆಯೋ
ಬಾಯಿ ಬಿಟ್ರೆ ಮೊಸಳೆಯೋ
ನರವಾನರನು
ಈ ನರವಾನರನು
ತಾನಾಗಿ ಸುಮ್ಮನೆ ಇರನು
ಇರಲು ಬಿಡನು

Literacy for a Billion

ಊರುದ್ಧಾರ ಮಾಡ್ತೀನಂತ
ಹೋದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಪಾಪನ್ಮಗ ಮನ್ಸಂಗ್ ಬುದ್ಧಿ
ಹೇಳ್ದೋರೆಲ್ಲಾ
ಎತ್ಹೋದ್ರಣ್ಣಾ
ಆಂ ಎಕ್ಹುಟ್ಟೋದ್ರಣ್ಣೋ

ಅದೇನ್ ಬುದ್ಧಿನೋ
ಅದ್ಯಾಕ್ ಅಂಗಾಡ್ತಾರೋ
ಅದ್ಯಾಕ್ ಅಂಗಾಡ್ತಾರೋ
ಪ್ರೀತಿ ಅಂತಾರೆ
ಪ್ರೀತಿ ಮಧ್ಯಕ್ಕೆ ಜಾತಿ ತರ್ತಾರೆ
ಧರ್ಮಾತ್ಮರ್ನೇ ಶಿಲ್ಬೆಗೆ ಇಡ್ತಾರೆ
ಅದೇನ್ ಖರ್ಮಾನೋ
ಅದ್ಯಾಕ್ ಇಂಗ್ಮಾಡ್ತಾರೋ
ಅದ್ಯಾಕ್ ಇಂಗ್ಮಾಡ್ತಾರೋ
ಸತ್ಯ ಅಂತಾರೆ
ಸತ್ಯ ಹೇಳಿದ್ರೆ ಹತ್ಯ ಮಾಡ್ತಾರೆ
ಮಹಾತ್ಮರ್ಗೇ ಗುಂಡನಿಕ್ತಾರೆ
ಒಳ್ಳೆತನ ಅರ್ಧ ಭಾಗ
ಕೆಟ್ಟತನ ಮಿಕ್ಕ ಭಾಗ
ಹಾಗೂ ಅಲ್ಲ
ಇವನು ಹೀಗೂ ಅಲ್ಲ
ಭೂಮಿಗೆ ಇವೇ ಗೆಳೆಯ
ಇವೇ ಪ್ರಳಯ

ಊರುದ್ಧಾರ ಮಾಡ್ತೀನಂತ
ಹೋದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಪಾಪನ್ಮಗ ಮನ್ಸಂಗ್ ಬುದ್ಧಿ
ಹೇಳ್ದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಮನ್ಸಾ
ಹಾವು ಹಲ್ಲಿ ಚೇಳಿಗಿಂತ್ಲೂ
ವಿಷ ವಿಷ ವಿಷ
ಮನ್ಸಾ
ತೋಳ ಸಿಂಹ ಹುಲಿಗಿಂತ್ಲೂ
ಕ್ರೂರ ಕ್ರೂರ ಕ್ರೂರ
ಊರುದ್ಧಾರ ಮಾಡ್ತೀನಂತ
ಹೋದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣಾ
ಹ ಹ
ಪಾಪನ್ಮಗ ಮನ್ಸಂಗ್ ಬುದ್ಧಿ
ಹೇಳ್ದೋರೆಲ್ಲಾ
ಎತ್ಹೋದ್ರಣ್ಣಾ
ಎಕ್ಹುಟ್ಟೋದ್ರಣ್ಣೋ
ಜನಗಳು ಜನಗಳು
ಇವರು ಕೆಟ್ಟ ಜನಗಳು
ಜನಗಳು ಜನಗಳು
ಇವರು ಕೆಟ್ಟ ಜನಗಳು

ಜನಗಳು ಜನಗಳು
ಇವರು ಕೆಟ್ಟ ಜನಗಳು

ಜನಗಳು ಜನಗಳು
ಇವರು ಕೆಟ್ಟ ಜನಗಳು

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.